

**ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರು**
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



**ಸನ್ಮಾನ್ಯ ಶ್ರೀ ಅಭಯಚಂದ್ರ ಜೈನ್**
ಯುವಜನ ಸೇವೆ ಮತ್ತು ಮೀನುಗಾರಿಕೆ ಸಚಿವರು
ಕರ್ನಾಟಕ ಸರ್ಕಾರ



**ಸನ್ಮಾನ್ಯ ಶ್ರೀ ಎ. ಮಂಜು**
ಪಶುಸಂಗೋಪನಾ ಸಚಿವರು
ಕರ್ನಾಟಕ ಸರ್ಕಾರ



**ಸನ್ಮಾನ್ಯ ಶ್ರೀ ಬಿ. ರಮಾನಾಥ ರೈ**
ಅರಣ್ಯ ಮತ್ತು ಪರಿಸರ ಖಾತೆ ಸಚಿವರು,
ದ.ಕ. ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಅಯೋಜಿಸಿರುವ

# ರಾಷ್ಟ್ರೀಯ ಮತ್ಸ್ಯಮೇಳ-2016

**ಭಾರತದ ಅತಿದೊಡ್ಡ ಮೀನುಹಬ್ಬ**

**4-6, ಮಾರ್ಚ್ 2016**

ಸ್ಥಳ : ಡಾ। ಟಿ.ಎಂ.ಎ. ಪೈ ಇಂಟರ್‌ನ್ಯಾಶನಲ್
ಕನ್ವೆಂಷನ್ ಸೆಂಟರ್, ಮಂಗಳೂರು

ಸಹಯೋಗ:





# ಮತ್ಸ್ಯಮೇಳ 2016: ಭಾರತದ ಅತಿದೊಡ್ಡ ಮೀನುಹಬ್ಬ


## ಮೀನುಗಾರಿಕೆ ರಂಗದ ಅಭಿವೃದ್ಧಿ ಮತ್ತು ಅವಕಾಶಗಳನ್ನು ಪರಿಚಯಿಸುವ ವಿಶೇಷ ಮೇಳ

ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್, ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ 4–6, ಮಾರ್ಚ್ 2016 ಅವಧಿಯಲ್ಲಿ ಆಯೋಜಿಸಿರುವ "ರಾಷ್ಟ್ರೀಯ ಮತ್ಸ್ಯಮೇಳ 2016" ಕ್ಕೆ ತಮಗೆಲ್ಲರಿಗೂ ಸ್ವಾಗತ.

ಬೆಂಗಳೂರಿನ ಅರಮನೆ ಮೈದಾನದಲ್ಲಿ 2011 ರಲ್ಲಿ ನಡೆದ ಮತ್ಸ್ಯಮೇಳವನ್ನು ಸುಮಾರು 6 ಲಕ್ಷ ಜನರು ವೀಕ್ಷಿಸಿದ್ದರು. ಅದರ ಯಶಸ್ಸಿನ ನಂತರ ಈ ಬಾರಿ ಮೀನುಗಾರಿಕೆ ರಂಗದಲ್ಲಾಗುತ್ತಿರುವ ಅಭಿವೃದ್ಧಿ ಮತ್ತು ಈ ರಂಗದಲ್ಲಿರುವ ಅವಕಾಶಗಳನ್ನು ಜನರಿಗೆ ಪರಿಚಯಿಸುವ ಸಲುವಾಗಿ, ಈ ಮೇಳವನ್ನು ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲು ತೀರ್ಮಾನಿಸಿಲಾಗಿದೆ. ಈ ಮೇಳದ ಮುಖ್ಯ ಉದ್ದೇಶ ಮೀನುಗಾರಿಕೆ ರಂಗದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ಉದ್ದಿಮೆದಾರರು, ಮೀನು ಕೃಷಿಕರು ಮತ್ತು ಸಾರ್ವಜನಿಕರನ್ನು ಒಂದೆಡೆ ಸೇರಿಸಿ, ಬೆಸುಗೆ ಹಾಕಿ ದೇಶದ ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ವೈಜ್ಞಾನಿಕ ತಳಹದಿ ಹಾಕುವುದು. ಪ್ರಪಂಚದಲ್ಲಿ ಭಾರತವು ಮೀನುಗಾರಿಕೆ ಮತ್ತು ಮೀನುಕೃಷಿ ಕ್ಷೇತ್ರದಲ್ಲಿ ಉತ್ತಮ ಸ್ಥಾನದಲ್ಲಿದೆ. ಜಾಗತಿಕವಾಗಿ, ಕಡಲ ಉತ್ಪಾದನೆಯಲ್ಲಿ 7ನೇ ಸ್ಥಾನ ಮತ್ತು ಮೀನುಕೃಷಿಯಲ್ಲಿ 2ನೇ ಸ್ಥಾನದಲ್ಲಿದೆ. ಭಾರತದಲ್ಲಿ ಪ್ರಸ್ತುತ 9.56 ಮಿ.ಟ. ಮೀನಿನ ಉತ್ಪಾದನೆಯಾಗುತ್ತಿದ್ದು, 6.13 ಮಿ.ಟ. ಒಳನಾಡಿನಿಂದ, 3.44 ಮಿ.ಟ. ಸಾಗರೋತ್ಪನ್ನಗಳಿಂದ ಬರುತ್ತಿದೆ. ಸುಮಾರು 15 ಮಿಲಿಯನ್ ಜನರಿಗೆ ಜೀವನಾಧಾರವಾಗಿರುವ ಈ ಕ್ಷೇತ್ರದಿಂದ ವಾರ್ಷಿಕ 33,500 ಕೋಟಿಗಳಷ್ಟು ವಹಿವಾಟು ನಡೆಯುತ್ತಿದ್ದು, ಇದು ದೇಶದ ಒಟ್ಟು ಆಂತರಿಕ ಉತ್ಪಾದಕತೆಯ (GDP) ಶೇ. 1.07 ರಷ್ಟು ಮತ್ತು ಕೃಷಿಕ್ಷೇತ್ರದ ಒಟ್ಟು ಆಂತರಿಕ ಉತ್ಪಾದಕತೆಯ (AGDP) ಶೇ. 5.4 ರಷ್ಟಿದೆ. ಈ ಮೀನುಗಾರಿಕೆ ಕ್ಷೇತ್ರವು ವಾರ್ಷಿಕವಾಗಿ ಶೇ. 6 ರಷ್ಟು ಬೆಳೆಯುತ್ತಿದೆ.

ದೇಶದಲ್ಲಿ ವಿವಿಧ ಕೃಷಿವೈವಿದ್ಯ ವಲಯಗಳಿದ್ದು, ಮೀನುಕೃಷಿ ಅಭಿವೃದ್ಧಿಗೆ ಉತ್ತಮ ಅವಕಾಶಗಳಿವೆ. ಭಾರತದಲ್ಲಿ ಸರಾಸರಿ ಮೀನಿನ ಲಭ್ಯತೆ ಸುಮಾರು 11 ಕೆ.ಜಿ.ಗಳಷ್ಟಿದ್ದು, ಇದನ್ನು ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸ್ಸು ಮಾಡಿರುವ 18 ಕೆ.ಜಿ.ಗೆ ಏರಿಸುವ ಅಗತ್ಯವಿದೆ. ಈ ಉತ್ಪಾದನೆಯನ್ನು ಹೆಚ್ಚಿಸಲು ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಮತ್ತು ಇತರೆ ಸಂಘ ಸಂಸ್ಥೆಗಳ ಸಾಂಘಿಕ ಕನಸು, ಜ್ಞಾನದ ಸಹಕಾರ ಮತ್ತು ಸಮನ್ವಯ ಕಾರ್ಯಾಚರಣೆಯಿಂದ ಮೀನುಗಾರಿಕೆ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಿದಲ್ಲಿ ಆಹಾರ ಉತ್ಪಾದನೆಯ ಹೆಚ್ಚಳದ ಜೊತೆಗೆ ಉದ್ಯೋಗ ಸೃಷ್ಟಿಸುವಲ್ಲಿ, ಗ್ರಾಮೀಣ ಅಭಿವೃದ್ಧಿಯಲ್ಲಿ ಮತ್ತು ಅಪೌಷ್ಟಿಕತೆ ನೀಗಿಸುವಲ್ಲಿ ಸಫಲರಾಗಬಹುದು. ಇದಕ್ಕೆ ಅಗತ್ಯವಿರುವ ಸಮನ್ವಯತೆಯನ್ನು ತರಲು ಈ ಮೇಳವನ್ನು ಆಯೋಜಿಸಲಾಗಿದೆ.










## ಮತ್ಸ್ಯಮೇಳ 2016ರ ಉದ್ದೇಶಗಳು :

- ಮೀನು ಮತ್ತು ಮೀನಿನ ಉತ್ಪನ್ನಗಳು ಆರೋಗ್ಯಕ್ಕೆ ಉತ್ತಮ ಆಹಾರಗಳೆಂದು ಪರಿಚಯಿಸುವುದು.
- ಮೀನುಗಾರಿಕೆ ವಿಜ್ಞಾನವನ್ನು ಪ್ರಚುರಪಡಿಸುವುದು.
- ಮೀನುಕೃಷಿಯನ್ನು ಉದ್ಯಮ ಮತ್ತು ಪರ್ಯಾಯ ಜೀವನೋಪಾಯಗಳಾಗಿ ಇರುವ ಅವಕಾಶಗಳನ್ನು ಪರಿಚಯಿಸುವುದು.
- ಹಸಿವು ಮತ್ತು ಬಡತನವನ್ನು ನೀಗಿಸುವಲ್ಲಿ ಮೀನುಗಾರಿಕೆ ರಂಗಕ್ಕಿರುವ ಸಾಧ್ಯತೆಗಳನ್ನು ಪರಿಚಯಿಸುವುದು.



## ಮತ್ಸ್ಯಮೇಳ 2016ರ ಆಕರ್ಷಣೆಗಳು :

- ಮೀನುಗಾರಿಕೆ ರಂಗದ ಶೈಕ್ಷಣಿಕ ಸಂಸ್ಥೆಗಳು, ಉದ್ಯಮ ಸಂಸ್ಥೆಗಳು ಮೀನಿನ ಆಹಾರ ಮತ್ತು ಖಾದ್ಯಮಳಿಗೆಗಳು.
- ನೇಚರ್ ಅಕ್ವೇರಿಯಂ ಮತ್ತು ಮೃದ್ವಂಗಿಗಳ ಪ್ರದರ್ಶನ.
- ಪಶ್ಚಿಮ ಘಟ್ಟದ ಮೀನುಗಳ ಪ್ರದರ್ಶನ.
- ತಾಜಾ ಮೀನು ಮತ್ತು ಅಲಂಕಾರಿಕ ಮೀನುಗಳ ಪ್ರದರ್ಶನ ಮತ್ತು ಮಾರಾಟ.
- ಮೀನಿನ ಖಾದ್ಯ ತಯಾರಿಕೆ, ಅಕ್ವೇರಿಯಂ ಜೋಡಣೆ, ಛಾಯಾಚಿತ್ರ ಮತ್ತು ಚಿತ್ರಬಿಡಿಸುವ ಸ್ಪರ್ಧೆಗಳು.
- ಸಾಂಸ್ಕೃತಿಕ ಕಾರ್ಯಕ್ರಮಗಳು.
- ರಾಷ್ಟ್ರೀಯ ಮೀನುಗಾರಿಕೆ ಸಮಾವೇಶ
- ಅರ್ಧ ಮ್ಯಾರಥಾನ್: ಮೀನಿಗಾಗಿ ಓಟ.


## ಯಾರು ಭಾಗವಹಿಸಬಹುದು?



- ಮಿನುಕೃಷಿ ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ಸಂಸ್ಥೆಗಳು.
- ಮೀನು ಸಂಸ್ಕರಣೆದಾರರು, ರಫ್ತುದಾರರು ಮತ್ತು ಉದ್ದಿಮೆದಾರರು.
- ಅಲಂಕಾರಿಕ ಮೀನು, ಉತ್ಪಾದಕರು ಮತ್ತು ಮಳಿಗೆದಾರರು.
- ಮೀನು ಆಹಾರ, ಆರೋಗ್ಯವರ್ಧನೆ ಮತ್ತು ಯಂತ್ರೋಪಕರಣಗಳ ಉತ್ಪಾದಕರು.
- ಮೀನುಗಾರಿಕೆ ಮತ್ತು ಮೀನುಕೃಷಿ ರಂಗದಲ್ಲಿ ತೊಡಗಿಸಿಕೊಂಡಿರುವ ಸ್ವಯಂ-ಸೇವಾ ಸಂಸ್ಥೆಗಳು.

## ಯಾತಕ್ಕಾಗಿ ಭಾಗವಹಿಸಬೇಕು:

- ವಿಜ್ಞಾನಿಗಳು, ಅಧಿಕಾರಿಗಳು ಮತ್ತು ಉದ್ದಿಮೆದಾರರ ಪರಿಚಯ.
- ವ್ಯಾಪಾರ ಅಭಿವೃದ್ಧಿ ಮತ್ತು ವಿಸ್ತರಣೆ.
- ಹೊಸ ಗ್ರಾಹಕರ ಸೃಷ್ಟಿ.
- ಹೊಸ ಅವಿಷ್ಕಾರಗಳ ಪರಿಚಯ ಮತ್ತು ಹೊಸ ಉತ್ಪನ್ನಗಳ ಬಿಡುಗಡೆ.






## ಮಳಿಗೆಗಳನ್ನು ಕಾಯ್ದಿರಿಸುವುದು ಹೇಗೆ?



ಮತ್ಸ್ಯಮೇಳದಲ್ಲಿ ಚಾವಣಿಯ ಒಳಗೆ ಎಕ್ಸಿಕ್ಯೂಟೀವ್ ಅಕ್ಟೋನಾರ್ಮ್ ಮಾದರಿ ಮಳಿಗೆಗಳು 3 X 3 ಮೀ. ವಿನ್ಯಾಸದ ಮಳಿಗೆಗಳು ಲಭ್ಯವಿರುತ್ತವೆ. ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಮಳಿಗೆಗಳನ್ನು ನೀಡಲಾಗುವುದು. ಮಳಿಗೆಗಳನ್ನು ದಿನಾಂಕ 15.02.2016 ರ ಒಳಗೆ ಕಾಯ್ದಿರಿಸಿಕೊಳ್ಳಬೇಕು. ಅರ್ಜಿಗಳನ್ನು ಕೆಳಗೆ ನೀಡಿರುವ ವೆಬ್‌ಪೇಜ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.



ಕರ್ನಾಟದ ರಾಜ್ಯದ ಮೀನು : ಪಂಟಿಯಸ್ ಕರ್ನಾಟಿಕಸ್

## ಮಳಿಗೆಗಳನ್ನು ಕಾಯ್ದಿರಿಸಲು ಅನುಸರಿಸಬೇಕಾದ ರೀತಿ:

ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು, ಕೆಳಗೆ ತಿಳಿಸಿದ ಮಳಿಗೆಯ ನೋಂದಣಿ ಶುಲ್ಕವನ್ನು **"Organizing Secretary, Mathsyamela-2016"** ಇವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್‌ಅನ್ನು ಮಂಗಳೂರಿನಲ್ಲಿ ಜಮೆಯಾಗಲು ತೆಗೆದು ಕೆಳಗೆ ತಿಳಿಸಿದ ವಿಳಾಸಕ್ಕೆ ಕಳುಹಿಸಬೇಕು ಅಥವಾ ನೇರವಾಗಿ ಆಯೋಜಕರ ಖಾತೆಗೆ ಜಮೆ ಮಾಡಿ ಮಾಹಿತಿಯನ್ನು ತಿಳಿಸುವುದು. ಆಯೋಜಕರ ಖಾತೆಯ ವಿಳಾಸ:
**Canara Bank Saving Account No. 8520101103291; IFSC: CNRB0008520**

### ಮಳಿಗೆಗಳ ಅಳತೆ (3X3 ಮೀ.)

| # | ವಿಭಾಗ | ಬಾಡಿಗೆ (ರೂ.) |
|---|---|---|
| 1. | ಸರ್ಕಾರಿ ಸಂಸ್ಥೆಗಳು | 10000 |
| 2. | ಖಾಸಗೀ ಸಂಸ್ಥೆಗಳು | 15000 |
| 3. | ಅಕ್ವೇರಿಯಂ ಮಳಿಗೆಗಳು | 20000 |
| 4. | ಆಹಾರ ಮಳಿಗೆಗಳು | 25000 |
| 5. | ಸ್ವಯಂ-ಸೇವಾ ಸಂಸ್ಥೆಗಳು | 5000 |
| 6. | ಆವರಣದ ಒಳಗೆ ಮತ್ತು ಹೊರಗೆ ಲಭ್ಯವಿರುವ ಜಾಗ | ನೆಗೋಷಿಯೇಬಲ್ |

### ಪ್ರಾಯೋಜನೆಗೆ ಅವಕಾಶಗಳು

| # | ವಿಭಾಗ | ಶುಲ್ಕ (ರೂ.) |
|---|---|---|
| 1. | ಪ್ಲಾಟಿನಂ ವಿಭಾಗ | 5,00,000 |
| 2. | ವಜ್ರ ವಿಭಾಗ | 3,00,000 |
| 3. | ಚಿನ್ನ ವಿಭಾಗ | 2,00,000 |
| 4. | ಬೆಳ್ಳಿ ವಿಭಾಗ | 1,00,000 |
| 5. | ಸ್ವಯಂ-ಸೇವಾ ಸಂಸ್ಥೆಗಳು | 50,000 |





**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಡಾ. ಕೆ.ಎಂ. ಶಂಕರ್**
ಡೀನ್ (ಮೀನುಗಾರಿಕೆ), ಚೇರ್ಮನ್ - ಮತ್ಸ್ಯಮೇಳ 2016
ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು 575002
0824-2249256/09480571370/deanfisheries@gmail.com

**ಡಾ. ಎಸ್.ಎಂ. ಶಿವಪ್ರಕಾಶ್**
ವಿಸ್ತರಣಾ ನಿರ್ದೇಶಕರು ಮತ್ತು ಚೇರ್ಮನ್– ರಾಷ್ಟ್ರೀಯ ಕಾರ್ಯಾಗಾರ
ಕಪಪಮೀವಿ, ಬೀದರ್
09448302597/dekvafsu@gmail.com

**ಡಾ. ಶಿವಕುಮಾರ್ ಮಗದ**
ಪ್ರಾಧ್ಯಾಪಕರು ಮತ್ತು ಸಂಘಟನಾ ಕಾರ್ಯದರ್ಶಿ– ಮತ್ಸ್ಯಮೇಳ 2016
ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು 575002
0824-2249256/09945783906/mathsyamela2016@gmail.com
Cc to: shivakumarmagada@gmail.com

**URL: www.mathsyamela2016.com**

**Event Management:**
Team
SCUBA
Students Cultural Union for Bringing Alchemy (R), CoF, Mangaluru